98

<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ ರವರು ನಿಯಮ 72ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.</u>

<u>ವಿಷಯ:</u>

2022-23ನೇ ಸಾಲಿನ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ವತಿಯಿಂದ ಸರ್ಕಾರಿ ಪ್ರೌಢಶಾಲೆಗಳಿಗೆ 3 ಸೀಟರ್ ಡೆಸ್ಕ್‌ಗಳನ್ನು ಪೂರೈಸಲು ಗುತ್ತಿಗೆ ಪಡೆದ, ಮಹಾರಾಷ್ಟ್ರ ರಾಜ್ಯದ ಲಾತೂರಿನ ಲ್ಯಾಪ್ ಟ್ಯಾಪ್ ಕೇರ್ ಕಂಪನಿಯವರು ಇಲ್ಲಿಯವರೆಗೆ ಶೇ. 50% ರಷ್ಟು ಡೆಸ್ಕ್‌ಗಳನ್ನು ಪೂರೈಕೆ ಮಾಡದೇ, ಪ್ರೌಢಶಾಲಾ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಶೈಕ್ಷಣಿಕ ಪ್ರಗತಿಗೆ ಅಡಚಣೆ ಉಂಟಾಗುತ್ತಿರುವ ಸಂಬಂಧ ಹಾಗೂ ಪೂರೈಕೆ ಮಾಡಿರುವ ಡೆಸ್ಕ್‌ಗಳ ದರದಲ್ಲಿ ಏರುಪೇರಾಗಿರುವ ಕುರಿತು ದಿನಾಂಕ:22.07.2024ರ ವಿಧಾನ ಪರಷತ್ತಿನ ಕಾರ್ಯ ಕಲಾಪದಲ್ಲಿ ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವರ ಗಮನವನ್ನು ಸೆಳೆಯಲು ಅನುಮತಿ ನೀಡುವಂತೆ ಕೋರುತ್ತೇನೆ.

<u>ಉತ್ತರ :</u>

ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಗೆ ಜಿಲ್ಲಾ ಪಂಚಾಯತ್ ಅನುದಾನ ಲೆಕ್ಕ ಶಿರ್ಷಿಕೆ:2202-00-104-0-35 (221)ರಲ್ಲಿ ಸಾಧನ ಸಾಮಗ್ರಿ ಯೋಜನೆಯಲ್ಲಿ 2022-23ನೇ ಮತ್ತು 2023-24ನೇ ಸಾಲಿಗೆ ಒಟ್ಟು 3438 ಡೆಸ್ಕ್‌ಗಳನ್ನು ಪೂರೈಸಲು ಜೆಮ್ ಪೋರ್ಟಲ್‌ನಲ್ಲಿ ನಡೆದ ಟೆಂಡರ್‌ನಲ್ಲಿ ಮಹಾರಾಷ್ಟ್ರ ರಾಜ್ಯದ ಲಾತೂರಿನ ಲ್ಯಾಪ್ ಟ್ಯಾಪ್ ಕೇರ್ ಕಂಪನಿಯವರು ಸರ್ಕಾರ ನಿಗದಿಪಡಿಸಿದ ದರ ರೂ.5724/- ಗಳ ಘಟಕ ವೆಚ್ಚದಂತೆ 3 ಸೀಟರ್ ಡೆಸ್ಕ್‌ಗಳನ್ನು ಪೂರೈಕೆ ಮಾಡಲು ಬಿಡ್ ಪಡೆದಿರುತ್ತಾರೆ.

ಅದರಲ್ಲಿ ಒಟ್ಟು 1677 ಡೆಸ್ಕ್‌ಗಳನ್ನು ದರದಲ್ಲಿ ಯಾವುದೇ ವ್ಯತ್ಯಾಸ ಇಲ್ಲದಂತೆ ಪೂರೈಕೆ ಮಾಡಿರುತ್ತಾರೆ. ಉಳಿಕೆ ಡೆಸ್ಕ್‌ಗಳನ್ನು ಪೂರೈಕೆ ಮಾಡದೇ ಇರುವ ಕಾರಣ ಸಂಬಂಧಿಸಿದ ಬಿಡ್‌ದಾರರಿಗೆ ಈಗಾಗಲೇ ಉಪನಿರ್ದೇಶಕರು(ಆ), ಶಾಲಾ ಶಿಕ್ಷಣ ಇಲಾಖೆ, ಚಿಕ್ಕೋಡಿ ರವರು ನೋಟಿಸ್ ಜಾರಿ ಮಾಡಿರುತ್ತಾರೆ.

ಮುಂದುವರೆದು 2023-24ನೇ ಸಾಲಿಗೆ ನಿಗದಿಪಡಿಸಿದ 1761 ಡೆಸ್ಕ್‌ಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್‌ರಾಜ್ ಇಂಜನಿಯರಿಂಗ್ ವಿಭಾಗ, ಚಿಕ್ಕೋಡಿ ಇವರ ಮೂಲಕ ಮರು ಟೆಂಡರ್ ನಡೆಸಿ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಡೆಸ್ಕ್‌ಗಳನ್ನು ಸರಬರಾಜು ಮಾಡಲು ಅಗತ್ಯ ಕ್ರಮವಹಿಸಲಾಗುತ್ತಿದೆ.

**ಸಂಖ್ಯೆ : ಇಪಿ 81 ಎಂಪಿಇ 2024**

(ಎಸ್.ಮಧು ಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**